# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1323
2) ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 19-03-2025
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತಪಟ್ಟ ಮೀನುಗಾರರ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ಕಳೆದ 5 ವರ್ಷಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತಪಟ್ಟ ಮೀನುಗಾರರ ಸಂಖ್ಯೆಯ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ; |

| ವರ್ಷ | ಪ್ರಕರಣಗಳ ಸಂಖ್ಯೆ |
|---|---|
| 2019-2020 | 78 |
| 2020-2021 | 84 |
| 2021-2022 | 62 |
| 2022-2023 | 23 |
| 2023-2024 | 126 |

| | ಪ್ರಶ್ನೆ | ಉತ್ತರ |
|---|---|---|
| ಆ) | ಮೀನುಗಾರರ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ವಾರಸುದಾರರಿಗೆ/ ಅವಲಂಬಿತದಾರರಿಗೆ ನೀಡಲಾಗುವ ಗರಿಷ್ಟ ಪರಿಹಾರ ಮೊತ್ತ ಎಷ್ಟು; ಕಳೆದ 5 ವರ್ಷಗಳಲ್ಲಿ ವಿತರಿಸಲಾಗಿರುವ ಪರಿಹಾರ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ಮೀನುಗಾರರ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ವಾರಸುದಾರರಿಗೆ / ಅವಲಂಬಿತದಾರರಿಗೆ ಪ್ರಸ್ತುತ ರೂ.10.00 ಲಕ್ಷ ಗರಿಷ್ಟ ಪರಿಹಾರವನ್ನು ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಮಾರ್ಗಸೂಚಿಗಳನ್ವಯ ನೀಡಲಾಗುವುದು.<br>ಕಳೆದ 5 ವರ್ಷಗಳಲ್ಲಿ ಮರಣ ಪ್ರಕರಣಗಳಿಗೆ ವಿತರಿಸಲಾಗಿರುವ ಪರಿಹಾರದ ಮೊತ್ತದ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ; |

| ವರ್ಷ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 2019-2020 | 223.50 |
| 2020-2021 | 387.00 |
| 2021-2022 | 328.00 |
| 2022-2023 | 132.50 |
| 2023-2024 | 703.00 |

| | ಪ್ರಶ್ನೆ | ಉತ್ತರ |
|---|---|---|
| ಇ) | ಮೀನುಗಾರಿಕೆಯಲ್ಲಿ ತೊಡಗಿರುವಾಗ ಬಲೆಹಾನಿ, ದೋಣಿಹಾನಿ ಹಾಗೂ ವೈದ್ಯಕೀಯ ವೆಚ್ಚಗಳಿಗಾಗಿ ನೀಡಲಾಗುವ ಗರಿಷ್ಟ ಪರಿಹಾರ ಮೊತ್ತ ಎಷ್ಟು; (ಕಳೆದ 5 ವರ್ಷಗಳ ನೀಡಲಾದ ಪರಿಹಾರ ಕುರಿತು ಮಾಹಿತಿ ನೀಡುವುದು) | ಮೀನುಗಾರಿಕೆಯಲ್ಲಿ ತೊಡಗಿರುವಾಗ ಸಂಭವಿಸಿದ ಬಲೆಹಾನಿ / ದೋಣಿ ಹಾನಿ ಪ್ರಕರಣಗಳಿಗೆ ಪ್ರಸ್ತುತ ರೂ.10.00 ಲಕ್ಷಗಳವರೆಗೆ ಗರಿಷ್ಟ ಪರಿಹಾರವನ್ನು ಹಾಗೂ ವೈದ್ಯಕೀಯ ವೆಚ್ಚಗಳಿಗಾಗಿ ಪ್ರಸ್ತುತ ರೂ.3.00 ಲಕ್ಷಗಳ ಗರಿಷ್ಟ ಪರಿಹಾರವನ್ನು ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಮಾರ್ಗಸೂಚಿಗಳನ್ವಯ ನೀಡಲಾಗುವುದು.<br>ಕಳೆದ 5 ವರ್ಷಗಳಲ್ಲಿ ಮೀನುಗಾರಿಕೆ ದೋಣಿ ಹಾನಿ / ಬಲೆಹಾನಿ ಹಾಗೂ ವೈದ್ಯಕೀಯ ವೆಚ್ಚಗಳಿಗಾಗಿ ವಿತರಿಸಲಾಗಿರುವ ಪರಿಹಾರದ ಮೊತ್ತದ ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ; |

(ರೂ. ಲಕ್ಷಗಳಲ್ಲಿ)

| ವರ್ಷ | ಬಲೆ ಹಾನಿ/ ದೋಣಿ ಹಾನಿ | | ವೈದ್ಯಕೀಯ ವೆಚ್ಚ | |
|---|---|---|---|---|
| | ಪ್ರಕರಣಗಳ ಸಂಖ್ಯೆ | ಮೊತ್ತ | ಪ್ರಕರಣಗಳ ಸಂಖ್ಯೆ | ಮೊತ್ತ |
| 2019-2020 | 15 | 13.35 | 1 | 0.42 |
| 2020-2021 | 37 | 30.14 | 1 | 0.25 |
| 2021-2022 | 29 | 20.19 | 1 | 2.00 |
| 2022-2023 | 10 | 5.30 | 1 | 2.00 |
| 2023-2024 | 86 | 187.00 | 1 | 0.07 |

| | | |
|---|---|---|
| ಈ) | ಕಳೆದ 5 ವರ್ಷಗಳಲ್ಲಿ ಸಮುದ್ರಕ್ಕೆ ಇಳಿದು ಮೃತಪಟ್ಟ ಹಾಗೂ ರಕ್ಷಿಸಲ್ಪಟ್ಟ ಪ್ರವಾಸಿಗರ ಸಂಖ್ಯೆ ಎಷ್ಟು ಪ್ರವಾಸಿಗರ ಸುರಕ್ಷತೆಗೆ ತೆಗೆದುಕೊಂಡಿರುವ ಕ್ರಮಗಳೇನು? (ವರ್ಷವಾರು ಮಾಹಿತಿ ನೀಡುವುದು) | ಪ್ರವಾಸೋದ್ಯಮ ಇಲಾಖೆಯಿಂದ ಪಡೆಯಲಾದ ಮಾಹಿತಿ ಪ್ರಕಾರ ಕಳೆದ 5 ವರ್ಷಗಳಲ್ಲಿ ಸಮುದ್ರಕ್ಕೆ ಇಳಿದು ಮೃತಪಟ್ಟ ಹಾಗೂ ರಕ್ಷಿಸಲ್ಪಟ್ಟ ಪ್ರವಾಸಿಗರ ಮಾಹಿತಿಯನ್ನು ಹಾಗೂ ಪ್ರವಾಸಿಗರ ಸುರಕ್ಷತೆಗಾಗಿ ತೆಗೆದುಕೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |

ಸಂಖ್ಯೆ: ಪಸಂಮೀ ಇ-80 ಮೀಇಯೋ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ), ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರು ರವರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1323ಕ್ಕೆ ಅನುಬಂಧ**

| ಕ್ರ. ಸಂ | ಜಿಲ್ಲೆಯ ಹೆಸರು | ಮೃತಪಟ್ಟ ಪ್ರವಾಸಿಗರ ಸಂಖ್ಯೆ | ರಕ್ಷಿಸಲ್ಪಟ್ಟ ಪ್ರವಾಸಿಗರ ಸಂಖ್ಯೆ | ತಗೆದುಕೊಂಡ ಕ್ರಮಗಳ ವಿವರ | |
|---|---|---|---|---|---|
| | | | | ನಿಯೋಜಿಸಿರುವ ಲೈಫ್ ಗಾರ್ಡ್‌ಗಳ ಸಂಖ್ಯೆ | ಇತರೆ ಕ್ರಮ |
| 1 | ಉತ್ತರ ಕನ್ನಡ | 95 | 322 | 34 | ಉತ್ತರ ಕನ್ನಡ ಜಿಲ್ಲೆಯ ಕಡಲತೀರಗಳ ವ್ಯಾಪ್ತಿಯಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರವಾಸೋದ್ಯಮ ಇಲಾಖೆಯಿಂದ 04 ಪ್ರವಾಸಿ ಮಿತ್ರ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. |
| 2 | ದಕ್ಷಿಣ ಕನ್ನಡ | 25 | 08 | 18 | ದಕ್ಷಿಣ ಕನ್ನಡ ಜಿಲ್ಲೆಯ ಕಡಲತೀರಗಳ ವ್ಯಾಪ್ತಿಯಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರವಾಸೋದ್ಯಮ ಇಲಾಖೆಯಿಂದ 08 ಪ್ರವಾಸಿ ಮಿತ್ರ ಸಿಬ್ಬಂಧಿಗಳನ್ನು ನಿಯೋಜಿಸಲಾಗಿದೆ. ಅದಲ್ಲದೇ ಜೀವ ರಕ್ಷಕ ಉಪಕರಣಗಳು, ಸೈನೇಜ್ ಬೋರ್ಡ್ (ಸೂಚನಾ ಫಲಕ)ಗಳನ್ನು ಅಳವಡಿಸಲಾಗಿದೆ. |
| 3 | ಉಡುಪಿ | 28 | 00 | 10 | ಉಡುಪಿ ಜಿಲ್ಲೆಯ ಕಡಲತೀರಗಳ ವ್ಯಾಪ್ತಿಯಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರವಾಸೋದ್ಯಮ ಇಲಾಖೆಯಿಂದ 10 ಪ್ರವಾಸಿ ಮಿತ್ರ ಸಿಬ್ಬಂಧಿಗಳನ್ನು ನಿಯೋಜಿಸಲಾಗಿದೆ. |

x x x x x